Sri T. MARIAPPA.—1949-50, 1950-51 and 1951-52.

Janab MOHAMED VALIULLA.—According to the plan, two lakhs of pallas were expected. Was that quantity got?

Sri T. MARIAPPA.—Nature went against us unfortunately.

Janab MOHAMED VALIULLA.—What was their expectation for 1949-50? Is it two lakhs of pallas or less or more?

Sri T. MARIAPPA.—Two lakhs did not materialise.

Janab MOHAMED VALIULLA.—How much was received?

Sri T. MARIAPPA.—I want notice. In other places under wells they have grown Kar Ragi. I cannot off-hand give information about the quantity received.

Number of Municipalities in the State receiving extension of their term.

*Q. 26. **Mushir-ul-Mulk J. MAHOMED IMAM** (Chitaldrug *cum* Tumkur—Muslim).—

Will the Government be pleased to state:—

(*a*) the number of Municipalities in the State that received extension of their term and the names of such Municipalities including Town and City Municipalities;

(*b*) the reasons for giving extension to each of these Municipalities?

A.—**Sri R. CHENNIGARAMIAH** (Minister for Local Self-Government).—

(*a*) Eleven Municipalities.

A copy of Statement is appended below.

(*b*) *Vide* Appendix to clause (*a*) above.

Name of District	Name of Municipality the term of which is extended	Reasons
Chitaldrug ...	1. Harihar Town Municipality from 1st January 1950 to 30th June 1950.	The town was at first divided into four wards for electoral purposes. Requests were received to the effect that the town should be divided into five wards. Some time was necessary to examine the question and pass orders.
	2. Challakere Town Municipality from 1st January 1950 to 30th June 1950.	As there were some complaints in respect of the voters' list prepared, the matter required careful examination.
	3. Chitaldrug Town Municipality from 1st July 1950 to end of March 1951.	The term was extended as there was a request by the citizens of the place to extend the same.
	4. Hiriyur Minor Municipality upto end of June 1950.	In connection with its conversion into a Town Municipal Council.
	5. Hosadurga Minor Municipality upto end of December 1950	Do do
	6. Mayakonda Minor Municipality upto end of December 1950	As recommended by the Deputy Commissioner, Chitaldrug.
Shimoga ...	1. Nyamathi Minor Municipality till 15th July 1950.	In connection with its conversion into a Town Municipality.
	2. Chennagiri Minor Municipality extended by two months.	In connection with the consideration of the representation from the residents of this Municipality to divide the town into blocks for electoral purposes. There was also a complaint made during the visit to the place of the Minister of Local Self-Government. This had to be examined.
	3. Shiralkoppa Minor Municipality by five months.	On the representation of the residents of this Municipality for converting it into a town Municipality, the term was extended in order to facilitate the observance of the required formalities.
Hassan ...	Banavar Minor Municipality, Arsikere Taluk, from 1st July 1950 to end of December 1950.	To set right some irregularities observed in the conduct of elections and to enable fresh elections being held according to rules.
Tumkur ...	Tumkur Town Municipality for one month during January 1950.	Owing to the revision of the calendar of events so as to enable the results of election being declared.

N.B.—In all the above cases, recommendations were made by the Deputy Commissioners, concerned.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ತಾವು ಉತ್ತರದಲ್ಲಿ ಕೊಟ್ಟಿರುವ ಹರಿಯೂರು, ಹೊಸದುರ್ಗ, ನ್ಯಾಮತಿ ಇವುಗಳೆಲ್ಲ ಈಗ ಮೈನರ್ ಮುನಿಸಿಪಾಲಿಟಿಗಳಾಗಿವೆಯೇ ಅಥವಾ ಟೌನ್ ಮುನಿಸಿಪಾಲಿಟಿಗಳಾಗಿವೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹರಿಯೂರು, ಹೊಸದುರ್ಗ ಮತ್ತು ನ್ಯಾಮತಿ ಇವುಗಳೆಲ್ಲ ಈಗ ಟೌನ್ ಮುನಿಸಿಪಾಲಿಟಿಗಳಾಗಿವೆ.

ಜನಾಬ್. ಜೆ. ಮಹಮದ್ ಇಮಾಂರವರು.—ಹರಿಹರದಲ್ಲಿ 4 ವಾರ್ಡುಗಳಿದ್ದುದನ್ನು 5ಕ್ಕೆ ಪರಿವರ್ತನೆ ಮಾಡಬೇಕೆಂದು ತಮಗೆ ಯಾರಿಂದ ಮನವಿ ಬಂದಿತ್ತು ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲಿನ ಜನಗಳಿಂದ ಮನವಿಗಳು ಬಂದಿದ್ದುವು.

ಜನಾಬ್. ಜೆ. ಮಹಮದ್ ಇಮಾಂರವರು.—ಅಲ್ಲಿಯ ಮುನಿಸಿಪಾಲಿಟಿಯಲ್ಲಿರತಕ್ಕ ಕೌನ್ಸಿಲ್ಲರುಗಳು ಇತ್ಯಾದಿ ಯಾರಿಂದಲಾದರೂ ತಮಗೆ ಮನವಿ ಬಂದಿತ್ತೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಹು ಜನಗಳು ಒಟ್ಟಾಗಿ ಸೇರಿ ಅರ್ಜಿ ಬರೆದು ಅದಕ್ಕೆ ಅವರೆಲ್ಲರೂ ರುಜು ಮಾಡಿ ನಮಗೆ ಆ ಮೂಲಕ ಮನವಿ ಮಾಡಿಕೊಂಡಿದ್ದಾರೆ.

ಜನಾಬ್. ಜೆ. ಮಹಮದ್ ಇಮಾಂರವರು.—ಜಿಲ್ಲಾಧಿಕಾರಿಗಳಿಂದೇನಾದರೂ ತಮಗೆ ವರದಿ ಈ ಸಂಬಂಧವಾಗಿ ಬಂದಿತ್ತೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿದೆ.

ಜನಾಬ್. ಜೆ. ಮಹಮದ್ ಇಮಾಂರವರು.—ಅಲ್ಲಿ ಚುನಾವಣೆ ನಡೆಯುವುದಕ್ಕೆ ಸ್ವಲ್ಪ ಮುಂಚೆ ಹಾಗೆ ಮನವಿ ಬಂದಿದೆಯಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಜನಾಬ್ ಜೆ. ಮಹಮದ್ ಇಮಾಂರವರು.—ಸಾಧಾರಣವಾಗಿ ಎಲ್ಲಾ ಮುನಿಸಿಪಾಲಿಟಿಗಳಿಗೂ ಚುನಾವಣೆಯನ್ನು ಒಂದು ವರ್ಷ ಮುಂದಕ್ಕೆ ಹಾಕಲು ಒಂದು ಜೀವದಾನದ ಹುಕುಮನ್ನು ಸರ್ಕಾರದವರು ಹೊರಡಿಸಿರಲಿಲ್ಲವೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಜನಾಬ್ ಜೆ. ಮಹಮದ್ ಇಮಾಂರವರು.—ಕೆಲವು ಮುನಿಸಿಪಾಲಿಟಿಗಳ ಚುನಾವಣೆಯಾಗಿದ್ದು ಇನ್ನು ಕೆಲಸಕ್ಕೆ ಚುನಾವಣೆ ನಡೆಸಬೇಕೆಂದಿದ್ದ ಕಾಲದಲ್ಲಿ ಅಲ್ಲವೆ ತಾವು ಆ ರೀತಿಯಾಗಿ ಒಂದು ಹುಕುಮನ್ನು ಹೊರಡಿಸಿದ್ದು ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುನಿಸಿಪಾಲಿಟಿಗಳಿಗೆ ಆ ರೀತಿಯಾಗಿ ಒಂದು ವರ್ಷದ ಜೀವದಾನ ಮಾಡಿರಲಿಲ್ಲ. ಹಾಗೆ ಜೀವದಾನ ಮಾಡಿದ್ದು ಜಿಲ್ಲಾ ಬೋರ್ಡುಗಳ ವಿಷಯದಲ್ಲಿ ಮಾತ್ರ. ಆ ಸಮಯದಲ್ಲಿ ಅನಾನುಕೂಲತೆಗಳಲ್ಲಿದ್ದ ಕೆಲವು ಮುನಿಸಿಪಾಲಿಟಿಗಳವರೂ ಹಾಗೆ ಒಂದು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದರ ಮೇರೆ ಅವರಿಗೂ ಅದನ್ನು ಆನ್ವಯಮಾಡಲಾಯಿತು. ಬಾಕಿ ಕಡೆಗಳಲ್ಲೆಲ್ಲಾ ಮಾಮೂಲಿನಂತೆ ಚುನಾವಣೆಗಳು ನಡೆಸಲ್ಪಟ್ಟಿವೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಚೆನ್ನಗಿರಿಯಲ್ಲಿ ಚುನಾವಣೆ ನಡೆಸುವುದಕ್ಕೆ ಮೊದಲೇ ಹೀಗೆ ಒಂದು ನೋಟಿಫಿಕೇಷ್ಟ ಹೊರಡಿಸಲಾಗಿತ್ತೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಎಲ್. ಸಿದ್ದಪ್ಪನವರು.—ಯಾವಾಗ ಅದನ್ನು ಹೊರಡಿಸಿದ್ದು ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಚುನಾವಣೆ ನಡೆಯುವುದಕ್ಕೆ ಮುಂಚೆಯೇ ಹೊರಡಿಸಲಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವುದಕ್ಕೆ ಮುಂಚೆಯೇ ನೋಟಿಫಿಕೇಷ್ಟ ಹೊರಡಿಸಲಾಗಿತ್ತೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಎಲ್. ಸಿದ್ದಪ್ಪನವರು.—ಕ್ಯಾಲೆಂಡರ್ ಆಫ್ ಇವೆಂಟ್ಸ್ ಬಂದಿದ್ದರಿಂದ ಜನಗಳು ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳಲು ಜಿಲ್ಲಾಧಿಕಾರಿಗಳು, ನಿಮ್ಮ ಮನವಿ ಬಹಳ ತಡವಾಗಿ ಬಂದಿದೆ, ಆದ್ದರಿಂದ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ತಳ್ಳಿಹಾಕಿಬಿಟ್ಟಿದ್ದಾರೆ. ಹಾಗೆ ಮಾಡಿದ ನಂತರವೂ ಹೀಗೆ ಮುಂದುವರಿಸುವುದು ಉಚಿತವೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನು ಚೆನ್ನಗಿರಿಗೆ ಸರ್ಕಿಟ್ ಬಗ್ಗೆ ಹೋಗಿದ್ದಾಗ ಬಹಳ ಜನರು ಬಂದು ಅಲ್ಲಿಯ ಚುನಾವಣೆಯನ್ನು ಡಿವಿಜ್ಞಿವಾರು ಮಾಡುವುದು ಬಹಳ ಉತ್ತಮವಾದುದೆಂದೂ, ಅರಿಕೆ ಮಾಡಿಕೊಂಡರು. ಅದಕ್ಕಾಗಿ ಅಲ್ಲ ನಡೆಸಬೇಕಾದ ಕಾರ್ಯ ಕ್ರಮಗಳನ್ನು ಪೂರೈಸಲು ಸರ್ಕಾರದವರಿಗೆ ಸುಮಾರು 2 ತಿಂಗಳ ಕಾಲಾವಕಾಶ ಬೇಕಂಬುದಾಗಿ ಕಂಡುಬಂದುದರಿಂದ ಅಲ್ಲಿಯ ಚುನಾವಣೆಗಳನ್ನು 2 ತಿಂಗಳು ಕಾಲ ಮುಂದುವರಿಸಲಾಯಿತು.

ಶ್ರೀ ಎಲ್. ಸಿದ್ದಪ್ಪನವರು.—ಹಾಗೆ ಕೇವಲ 2 ತಿಂಗಳಿಗಾಗಿಯೇ ಹಾಗೆ ಮುಂದುವರಿಸಿದ್ದು ಸರಿಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸರಿ.

ಶ್ರೀ ಟಿ. ಸುಬ್ರಹ್ಮಣ್ಯಂರವರು (ತುಮಕೂರು ಜಿಲ್ಲೆ).—ಚಿಕ್ಕಳಕೆರೆ ಟೌನ್ ಮುನಿಸಿಪಾಲಿಟಿಯ ಚುನಾವಣೆಯನ್ನು ತಾವು ಎಷ್ಟು ಸಲ ಮುಂದಕ್ಕೆ ಹಾಕಲಾಯಿತು ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೂರಾವರ್ತಿ.

ಶ್ರೀ ಟಿ. ಸುಬ್ರಹ್ಮಣ್ಯರಂವರು.—ಕಾರಣವೇನು ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲಿಯ ಓಟರ್ಸ್ ಲಿಸ್ಟ್ ಆಗ್ಗೆ ಇನ್ನೂ ಕ್ರಮವಾಗಿ ತಯಾರಾಗಿರಲಿಲ್ಲ. ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವುದರೊಳಗಾಗಿ ಅಲ್ಲಿನ ಜನಗಳು ಓಟರ್ಸ್ ಲಿಸ್ಟಿನ ದೋಷ ದೋಷಗಳನ್ನು ಸರಿಪಡಿಸಿದ ನಂತರವೇ ಚುನಾವಣೆ ನಡೆಸಬೇಕೆಂದು, ಹಾಗೆ ಮಾಡದಿದ್ದರೆ ಅವರಿಗೆ ಚುನಾವಣೆಯಲ್ಲಿ ಅನೇಕ ತೊಂದರೆಗಳಾಗತಕ್ಕ ಸಂದರ್ಭಗಳಿವೆಯೆಂದೂ ನಮಗೆ ಮನವಿಗಳನ್ನು ಕಳುಹಿಸಿದ್ದರು. ಮತ್ತೊಂದು ಸಮಯಕ್ಕೆ ಸರಿಯಾಗಿ ಅಲ್ಲಿಗೆ ಒಬ್ಬ ಹೊಸದಾಗಿ ವರ್ಗವಾದ ಚೀಫ್ ಆಫೀಸರೇ ಅಲ್ಲಿನ ಚುನಾವಣೆಗಳನ್ನು ನಡೆಸಬೇಕಾಗಿದ್ದುದರಿಂದಲೂ, ಅವರು ಕೆಲವು ಅನಿರೀಕ್ಷಿತ ತೊಂದರೆಗಳಿಂದ ಅಲ್ಲಿಗೆ ಹೋಗಿ ಕೆಲಸಕ್ಕೆ ನೇರಲು ಒಂದೆರಡು ದಿನಗಳು ಸಾವಕಾಶವಾದ್ದರಿಂದಲೂ, ಇತ್ಯಾದಿ ಕೆಲವು ತೊಂದರೆಗಳಿಂದ ಅಲ್ಲಿಯ ಚುನಾವಣೆಗಳನ್ನು ಹಾಗೆ ಮುಂದುವರಿಸಲಾಯಿತು.

ಶ್ರೀ ಟಿ. ಸುಬ್ರಹ್ಮಣ್ಯಂರವರು.—ಹಾಗೆ ತಪ್ಪು ಮಾಡಿದ ಆಫೀಸರ ಮೇಲೆ ತಾವು ಕಾರ್ಯ ಕ್ರಮವನ್ನು ಕೈಗೊಂಡಿದ್ದೀರಾ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರು ಉದ್ದೇಶಪೂರ್ವಕವಾಗಿ ಹಾಗೆ ತಪ್ಪು ಮಾಡಲಲ್ಲವೆಂದೂ, ಕೇವಲ ಅನಾನುಕೂಲದ ದೆಶೆಯಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಲ್ಲವೆಂದೂ ತಿಳಿದುಬಂದಿದೆ.

ಶ್ರೀ ಟಿ. ಸುಬ್ರಹ್ಮಣ್ಯಂರವರು.—ಅವರಿಗೆ ಅಂಥ ಉದ್ದೇಶವೇನೂ ಇರಲಿಲ್ಲ ಎಂಬುದನ್ನು ಹೇಗೆ ಕಂಡು ಹಿಡಿದಿರಿ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವರನ್ನು ವಿಚಾರಣೆ ಮಾಡಿದ್ದರಲ್ಲಿ ಅದು ವ್ಯಕ್ತವಾಯಿತು.

Sri T. SUBRAMANYA.—Was any enquiry held about it?

Sri R. CHENNIGARAMIAH.—An enquiry was held and we were satisfied that he did not do it intentionally.

Sri T. SUBRAMANYA.—Who held the enquiry?

Sri R. CHENNIGARAMIAH.—We have got our own Government agency to hold an enquiry and they have been satisfied.

Sri T. SUBRAMANYA.—I suppose that information as to who held the enquiry is not confidential.

Sri R. CHENNIGARAMIAH.—It is the Deputy Commissioner. It is known to everybody.

Sri T. SUBRAMANYA.—I refer to the particular instance whether the Deputy Commissioner of Chitaldrug District held an enquiry. The Hon'ble Minister may say either 'yes' or 'no.'

Sri R. CHENNIGARAMIAH.—Yes and he reported the matter to the Government.

Sri T. SUBRAMANYA.—If unintentionally an officer of Government does anything wrong, he will not be dealt with, I suppose.

Sri M. N. JOIS *alias* M. N. NARASIMHAIYA (Mysore District—General)—The question is hypothetical, Sir.

ಶ್ರೀ ಟಿ. ಹನುಮಯ್ಯನವರು.—ಹನ್ನೊಂದು ಮುನಿಸಿಪಾಲಿಟಿಗಳಿಗೆ ಮಾತ್ರ ಜೀವದಾನ ಕೊಟ್ಟು ಉಳಿದವುಗಳಿಗೆ ಕೊಡದಿರಲು ಕಾರಣವೇನು?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವಶ್ಯಕತೆ ಇರಲಿಲ್ಲ; ಆದ್ದರಿಂದ ಕೊಡಲಿಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಉಳಿದವುಗಳಿಗೆ ಹೆಚ್ಚಿನ ಆವಶ್ಯಕತೆಯಿರಲಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವಶ್ಯಕತೆಯಿಲ್ಲದೆ ಯಾವುದೂ ಆಗುವುದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಉಳಿದವರು ಕೇಳಲಿಲ್ಲವೆ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪ್ರತಿಯೊಬ್ಬರೂ ಕೇಳಬಹುದು, ಆದರೆ ಅದಕ್ಕೆ ಸಾಕಷ್ಟು ಕಾರಣವಿರಬೇಕು ಮತ್ತು ಜಿಲ್ಲಾಧಿಕಾರಿಗಳು ತೃಪ್ತಿಪಡಿಸಿರಬೇಕು.

ಶ್ರೀ ಟಿ. ಹನುಮಯ್ಯನವರು.—ಹನ್ನೊಂದಕ್ಕೆ ಕಾರಣವಿದೆ, ಬಾಕಿಯುದಕ್ಕೆ ಇಲ್ಲ ಎಂದು ಹೇಳುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು, ಅದನ್ನು ಆಗಲೇ ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಆ ಮುನಿಸಿಪಾಲಿಟಿಗಳಿಗಿರುವ ತೊಂದರೆ ಇತರ ಮುನಿಸಿಪಾಲಿಟಿಗಳಿಗಿಲ್ಲವೆಂದು ಹೇಳುತ್ತೀರಾ?

ಶ್ರೀ ಆರ್ ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಮುನಿಸಿಪಲ್ ಕಾನೂನು ಮೈಸೂರು ದೇಶಕ್ಕೆಲ್ಲಾ ಒಂದೇ ರೀತಿ ಇದೆಯೋ ಅಥವಾ 11ಕ್ಕೆ ಮಾತ್ರ ಒಂದು ರೀತಿ, ಉಳಿದವಕ್ಕೆ ಬೇರೆ ರೀತಿ ಇದೆಯೋ?

(ಉತ್ತರವಿಲ್ಲ)

Mr. SPEAKER.—Question time is over.

Request for permission to discuss Special Resolution *re*: discharge of Mysore Military personnel handed over to the Centre.

ಮುಷಿರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು-ಮುಸ್ಲಿಂ)—ನಾನು ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನಿನ್ನೆ ದಿವಸ ಮೈಸೂರು ಮಿಲಿಟರಿ ಯನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಿರುವ ವಿಚಾರದಲ್ಲಿ ಕೆಲವು ಸಲಹೆಗಳನ್ನು ಮಂತ್ರಿಮಂಡಲಕ್ಕೆ ಕೊಡಬೇಕೆಂದು ಒಂದು ವಿಶೇಷ ನಿರ್ಣಯವನ್ನು ಕಳುಹಿಸಿದ್ದೇನೆ. ಮಂತ್ರಿಗಳಿಗೂ ಆ ವಿಚಾರವನ್ನು ಹೇಳಿದ್ದೇನೆ. ಅದು ಬಹಳ ಜರೂರಾದ ವಿಷಯ. ಸರ್ಕಾರಕ್ಕೂ ಸಲಹೆ ಕೊಡುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಅದನ್ನು ಚರ್ಚಿಸಲು ಅವಕಾಶಕೊಟ್ಟರೆ ಒಳ್ಳೆಯದು.

Mr. SPEAKER.—It will be examined.

ಜನಾಬ್ ಜೆ. ಮಹಮದ್ ಇಮಾಂರವರು.—ನೆನ್ನೆಯ ದಿನ ನಾನು ಒಂದು ಅಲ್ಪ ಕಾಲಾವಧಿ ಪ್ರಶ್ನೆ ಕಳುಹಿಸಿದ್ದರ ವಿಚಾರವು ಇನ್ನೂ ತಿಳಿಯಲಿಲ್ಲ. ಹೋದ ಅಧಿವೇಶನದಲ್ಲಿ ಎಕ್ಸೈಜು ವಿಚಾರಕ್ಕೆ ಸಂಬಂಧಪಟ್ಟ ಒಂದು ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿದ್ದೆ. ಅದು ಏನಾಯಿತೆಂಬುದೂ ಸಹ ಇದುವರೆಗೂ ತಿಳಿಯಲಿಲ್ಲ. ಆದ್ದರಿಂದ ಈಗಲೂ ಅದೇ ರೀತಿ ಆಗದೇ ಇರಲಿ ಎಂಬ ಉದ್ದೇಶದಿಂದ ನಾನು ಇದನ್ನು ಇಷ್ಟು ಒತ್ತಾಯದಿಂದ ಕೇಳುತ್ತಿದ್ದೇನೆ. ಬಹುಶಃ ಅವನ್ನು ತಾವು ಮಂತ್ರಿಗಳಿಗೆ ಕಳುಹಿಸಿರಬಹುದು. ಸಾಧಾರಣವಾಗಿ ಯಾವುದಾದರೂ ಪ್ರಶ್ನೆ, ನಿರ್ಣಯ ವಗೈರೆ ಕೊಟ್ಟರೆ, ಅದರ ವಿಚಾರವೇನಾಯಿತೆಂಬುದನ್ನು ಅಧ್ಯಕ್ಷರು ತಿಳಿಸಬೇಕಾದ್ದು ಅವಶ್ಯಕ ಈಗ ನಾನು ಅಲ್ಪಕಾಲಾವಧಿ ಪ್ರಶ್ನೆ ಕಳುಹಿಸಿ ಮೂರು ದಿವಸವಾಯಿತು. ನಾಳೆ ಅಧಿವೇಶನದ ಕಡೆಯ ದಿವಸವಾದರೆ ಅಷ್ಟರೊಳಗೆ ಅದು ಬಾರದೇ ಹೋದರೆ ಮುಂದಿನ ಅಧಿವೇಶನ ಬರುವವರೆಗೆ ಆ ವಿಚಾರ ಬರಲು ಅವಕಾಶವಿರುವುದಿಲ್ಲ.

Mr. SPEAKER.—But the resolution even if admitted can only be taken up tomorrow.

ಜನಾಬ್ ಜೆ. ಮಹಮದ್ ಇಮಾಂರವರು.—ಅದಕೆ ಅವಕಾಶ ಕೊಟ್ಟಿದೆಯೆ, ಆಥವಾ ಇಲ್ಲವೇ ಎಂಬುದನ್ನು ಸದನ್ಯರಿಗೆ ತಿಳಿಸಿದರೆ ಅನುಕೂಲ; ಅದನ್ನು ಓದಿಕೊಂಡು ವಿಷಯ ಸಂಗ್ರಹಿಸಲು ಅವಕಾಶವಿರುತ್ತದೆ. ಇಲ್ಲದಿದ್ದರೆ ಒಂದು ವೇಳೆ ಲ್ಯಾಪ್ಸ್ ಆದರೆ ನಿರರ್ಥಕವಾಗುತ್ತದೆ. ಆದ್ದರಿಂದ ಅದನ್ನು ತಕ್ಷಣವೇ ಈ ದಿವಸವೇ ತಿಳಿಸಬೇಕೆಂದು ಪ್ರಾರ್ಥನೆ.